# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ :6672 /2021

**ಚಾಸಾ :- 01 / ಪ್ರಾಸಾ :- 01**

| | |
|---|---|
| ಹೆಸರು | ರಾಘವೇಂದ್ರ ಬೋವಿ |
| ತಂದೆ ಹೆಸರು | ಹನುಮಪ್ಪ ಬೋವಿ |
| ವಯಸ್ಸು | 36 |
| ಉದ್ಯೋಗ | ಅಬಕಾರಿ ನಿರೀಕ್ಷಕರು , ರಾಮನಗರ ವಲಯ , |
| ವಿಳಾಸ | ರಾಮನಗರ |

**ದಿನಾಂಕಃ 23.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನವೆಂಬರ್ 2020 ರಿಂದ ಸೆಪ್ಟೆಂಬರ್ 2023 ರವರೆಗೆಗೂ ಅಬಕಾರಿ ಉಪ ಆಯುಕ್ತಕ ಕಛೇರಿ ರಾಮನಗರ ವಲಯದಲ್ಲಿ ಅಬಕಾರಿ ನಿರೀಕ್ಷಕ ನೆಂದುಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26.12.2020 ರಂದು ಗ್ರಾಮಪಂಚಾಯ್ತಿ ಚುನಾವಣೆಯ ಪ್ರಯುಕ್ತ Dry day ಎಂದು ಘೋಷಿಸಿದ್ದ ಕಾರಣ ಮಾಗಡಿ ವಲಯದ ಆಗಲಕೋಟೆಹ್ಯಾಂಡ್ ಪೋಸ್ಟ್ ವ್ಯಾಪ್ತಿಯಲ್ಲಿ ನಾನು ನಮ್ಮ ಸಿಬ್ಬಂದಿಗಳಾದ ಚಾಸಾ-4, ಮತ್ತು ಮಾಗಡಿ ವಲಯದ ಸಿಬ್ಬಂದಿಗಳಾದ ಚಾಸಾ- 5 ಮತ್ತು 6 ರವರು ಜೊತೆಯಲ್ಲಿ ಸರ್ಕಾರಿ ವಾಹನ ಸಂಖ್ಯೆ ಕೆಎ 01-ಜಿ-5794 ರಲ್ಲಿ ಗಸ್ತು ನಡೆಸುತ್ತಿರುವಾಗ ನಮಗೆ ಖಚಿತ ದೂರು ಬಂದ ಮೇರೆಗೆ ಆಗಲಕೋಟೆ ಹ್ಯಾಂಡ್ ಪೋಸ್ಟ್ ಬಳಿ ಇರುವ ಶಿವಾಜಿ ಮಿಲಿಟರಿ ಹೋಟೆಲ್ ?ನಲ್ಲಿ ಮದ್ಯವನ್ನು ಶೇಖರಣೆ ಮಾಡಿ ಗ್ರಾಹಕರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಬಂದಿತ್ತು. ನಂತರ ನಾವುಗಳು ಸದರಿ ಸ್ಥಳಕ್ಕೆ ತೆರಳಿ ಪಂಚರಾದ ಚಾಸಾ-2

ಮತ್ತು 3 ರವರಿಗೆ ನೋಟೀಸನ್ನು ಜಾರಿ ಮಾಡಿ ಬಂದ ವಿಷಯವನ್ನು ತಿಳಿಸಿ ನಮಗೆ ಪಂಚರಾಗಿ ಸಹಕರಿಸಬೇಕೆಂದು ಕೇಳಲಾಗಿ ಸದರಿ ಚಾಸಾ-2 ಮತ್ತು 3 ರವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದರು. ನಂತರ ಶಿವಾಜಿ ಮಿಲಿಟರಿ ಹೋಟೆಲ್ ಗೆ ತೆರಳಿ ನಮ್ಮ ಹಾಗೂ ಪಂಚರ ಅಂಗಶೋಧನೆ ಮಾಡಿಕೊಂಡು ಹೊಟೆಲ್ ಒಳಗೆ ಪ್ರವೇಶಿಸಿದಾಗ ಶಿವಾಜಿ ಹೋಟೆಲ್ ಪಶ್ಚಿಮಾಭಿಮುಖವಾಗಿ ಇರುತ್ತದೆ. ಹೊಟೆಲ್ ನ ಕ್ಯಾಶ್ ಕೌಂಟರ್ ನಲ್ಲಿ ಒಬ್ಬ ಆಸಮಿ ಕುಳಿತಿದ್ದು ಆತನನ್ನು ವಿಚಾರಿಸಲಾಗಿ ತನ್ನ ಹೆಸರು ಜನಾರ್ಧನ ರಾವ್ ಬಿನ್ ಬಾಬುರಾವ್ ಎಂದು ತಿಳಿಸಿರುತ್ತಾನೆ. ನಂತರ ಆತನಿಗೆ ಬಂದ ಮಾಹಿತಿಯನ್ನು ತಿಳಿಸಿದಾಗ ಆತನು ವಿಚಲಿತಗೊಂಡಿರುತ್ತಾನೆ. ನಂತರ ಸಮಯದ ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54ರ ಅಡಿಯಲ್ಲಿ ಶೋಧನಾ ಸಮುಚಿತ ವಾರೆಂಟ್ ಅನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇವೆ. ಹೋಟೆಲ್ ವಿಶಾಲವಾಗಿದ್ದು ಒಂದು ಡೆನಿಂಗ್ ಹಾಲ್ ಮತ್ತು ಅಡುಗೆ ಕೋಣೆ ಇರುತ್ತವೆ. ಹೋಟೆಲ್ ಹಿಂಭಾಗದಲ್ಲಿ ಒಂದು ಕೊಠಡಿ ಇದ್ದು ಕೊಠಡಿಯಲ್ಲಿ ಒಂದು ವಾಟರ್ ನ ಸಂಪ್ ಇರುತ್ತದೆ. ಅದನ್ನು ತೆಗೆದು ನೋಡಿದಾಗ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ?ಚೀಲ ಇದ್ದದ್ದು ಕಂಡುಬಂದಿರುತ್ತದೆ. ಸದರಿ ಚೀಲವನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ ವಿವಿಧ ಮಾದರಿಯ ಮದ್ಯದ ಟೆಟ್ರಾ ಪ್ಯಾಕುಗಳು ಇರುವುದು ಕಂಡುಬಂದಿರುತ್ತದೆ. ಅದನ್ನು ಪರಿಶೀಲಿಸಿ ನೋಡಲಾಗಿ 180 ಎಂ ಎಲ್ ನ 17 ಬ್ಯಾಗ್ಪೆಪೆರ್ ವಿಸ್ಕಿಯ ಟೆಟ್ರಾ ಪ್ಯಾಕಗಳು, 180 ಎಂ ಎಲ್ ನ 21 ಓಲ್ಡ ಟಾವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಮತ್ತು 90 ಎಂ ಎಲ್ ನ 17 ಓಸಿ ವಿಸ್ಕಿಯ ಟೆಟ್ರಾ ಪಾಕುಗಳು ಹೀಗೆ ಒಟ್ಟು 8.370 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ. ಸದರಿ ಮದ್ಯದ ಟೆಟ್ರಾ ಪ್ಯಾಕಗಳನ್ನು ಹೊಂದಲು ಪರವಾನಗಿ ಇದೆಯೆ ಎಂದು ಸದರಿ ವ್ಯಕ್ತಿಗೆ ಕೇಳಲಾಗಿ ಆತನು ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ಇದು ಒಬ್ಬ ವ್ಯಕ್ತಿಯು ಗರಿಷ್ಟ

ಮಟ್ಟಕ್ಕಿಂತ ಜಾಸ್ತಿ ಪರವಾನಗಿ ಇಲ್ಲದೆ ಇಟ್ಟಿರುವುದು ಅಬಕಾರಿ ಕಾಯ್ದೆಯ ಪ್ರಕಾರ ಅಪರಾಧವೆಂದು ತಿಳಿಸಿರುತ್ತೇವೆ. ಸದರಿ ಮದ್ಯಗಳನ್ನು ಯಾವ ಕಾರಣಕ್ಕಾಗಿ ಇಟ್ಟುಕೊಂಡಿರುತ್ತೀರಿ ಎಂದು ಕೇಳಲಾಗಿ ಆತನು ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶಕ್ಕಾಗಿ ಇಟ್ಟುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ. ನಂತರ ಜಪ್ತು ಪಡಿಸಿದ ಮದ್ಯದಗಳಿಂದ 4.500 ಲೀಟರ್ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾಯಿತು. ಅದನ್ನು ಬಿಳಿಯ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ 21 ಬಿ ಎಂಬ ಅಬಕಾರಿ ಸೀಲ್ ನಿಂದ ಮೊಹರು ಮಾಡಲಾಯಿತು. ನಂತರ ಮಾದರಿ ಚೀಟಿಯನ್ನು ತಯಾರಿಸಿ ಅದಕ್ಕೆ ಅಂಟಿಸಲಾಯಿತು. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಿ ಪಂಚರ ಸಹಿ ಪಡೆಯಲಾಯಿತು. ನಂತರ ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಕಛೇರಿಗೆ ತರಲಾಯಿತು. ನಂತರ ಮುದ್ದೆಮಾಲು ಹಾಗೂ ಆರೋಪಿಯನ್ನು ಅಬಕಾರಿ ಕಛೇರಿಗೆ ತೆರಳಿ ಮೊಕದ್ದಮೆ ದಾಖಲಿಸಲಾಗಿ ಪಂಚರಿಗೆ ತಿಳಿಸಲಾಯಿತು. ಮಹಜರ್ ಕ್ರಮವನ್ನು ಮಧ್ಯಾಹ್ನ 1.00 ರಿಂದ 2.30 ಗಂಟೆವರೆಗೆ ಜರುಗಿಸಲಾಯಿತು.

ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಹಿಸಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಚಾಸಾ-2 ಮತ್ತು 3 ರವರಿಗೆ ನೀಡಿದ ನೋಟೀಸ್ ? ಗಳನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ನೋಟೀಸುಗಳನ್ನು ನಿಪಿ-2 ಮತ್ತು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ), ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಶೋಧನಾ ಸಮುಚಿತ ವಾರೆಂಟ್ ?ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಶೋಧನಾ ಸಮುಚಿತ ವಾರೆಂಟ್ ನ್ನು ನಿಪಿ-04 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು

ಗರುತಿಸಲಾಯಿತು. ಈಗ ಸಾಕ್ಷಿಗೆ ಸರ್ಕಾರದ ತರ್ಪೆಪಿರ್ಯಾದನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ತರ್ಪೆ ಪಿರ್ಯಾದಿಯ ನ್ನು ನಿಪಿ-05 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಾದರಿ ಸೀಲುಗಳನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಾದರಿ ಸೀಲುಗಳನ್ನು ನಿಪಿ-06 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲ್ಸ್ ?ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಲಿಸ್ಟ್ ಆಫ್ ಆರ್ಟಿಕಲ್ಸ್ ?ಅನ್ನು ನಿಪಿ-07 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಆರೋಪಿ ಹಾಗೂ ಮುದೆದಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ.

ಈಗ ಸಾಕ್ಷಿಗೆ 180 ಎಂ ಎಲ್ ನ 10 ಬ್ಯಾಗ್ ಪೆಪರ್ ವಿಸ್ಕಿಯ ಟೆಟ್ರಾ ಪ್ಯಾಕಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. 180 ಎಂ ಎಲ್ ನ 10 ಓಲ್ಡ್ ಟಾವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಮತ್ತು 90 ಎಂ ಎಲ್ ನ 10 ಓಸಿ ವಿಸ್ಕಿಯ ಟೆಟ್ರಾ ಪಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು** :- ಆರೋಪಿಯು ಪಾಟೀಸವಾಲಿಗೆ ಕಾಲವಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**